ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆ ಒಪ್ಪಿಗೆ ನೀಡಲಾಯಿತು.

(ಅಂಗೀಕರಿಸಲಾಯಿತು.)

ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ 1999

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಾರ್ತಾ ಮತ್ತು ಪ್ರಚಾರ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, " 1999ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ನಾನು ಮೇಲ್ಮನೆಗೆ ಹೋಗಬೇಕಾಗಿದೆ. ಇದು ಆರ್ಡಿನೆನ್ಸ್ ರೀಪ್ಲೇಸ್‌ಮೆಂಟ್ ಬಿಲ್ ಆಗಿರುವುದರಿಂದ ದಯವಿಟ್ಟು ಈ ಬಿಲ್‌ನ್ನು ಪಾಸು ಮಾಡಿ ಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ : ಕರ್ನಾಟಕ ಪಂಚಾಯತ್‌ರಾಜ್ ವಿಧೇಯಕವು ಅತ್ಯಂತ ಪ್ರಾಮುಖ್ಯವಾದ ವಿಧೇಯಕವಾಗಿರುತ್ತದೆ. ಆದ್ದರಿಂದ ಇದರ ಮೇಲೆ ನಾವುಗಳು ಚರ್ಚೆ ಮಾಡಬೇಕಾಗುತ್ತದೆ. ಈಗಾಗಲೇ ಆರೂ ಕಾಲು ಘಂಟೆಯಾಗಿದೆ. ಆದುದರಿಂದ ಇದನ್ನು ಬೆಳಿಗ್ಗೆ ತೆಗೆದುಕೊಳ್ಳೋಣ.

Sri M.C. NANAIAH : This is ordinance replacement bill. I request that the bill be passed today. It has to go to upper Hose.

ಶ್ರೀ ಕೆ. ಎಸ್. ಈಶ್ವರಪ್ಪ : ಇದು ಹೈಕೋರ್ಟಿನಲ್ಲಿ ಚರ್ಚೆಯಾಗಿ ನಂತರ ಸುಪ್ರಿಂಕೋರ್ಟಿಗೆ ಹೋಗಿದೆ. ಇದರ ಬಗ್ಗೆ ಇನ್ನೂ ಬಗೆಹರಿಯಬೇಕು. ಆದ್ದರಿಂದ ಚರ್ಚೆ ಮಾಡುವುದು ಅವಶ್ಯಕತೆ ಇದೆ.

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ಸುಪ್ರಿಂಕೋರ್ಟಿನಿಂದ ಸ್ಟೇ ಬಂದಾದ ಮೇಲೆ ನೀವೆಲ್ಲ ಬಹಳ ಹಾರಾಡುತ್ತಿದ್ದೀರಿ.....

ಶ್ರೀ ಕೆ. ಎಸ್. ಈಶ್ವರಪ್ಪ : ಅದರ ಬಗ್ಗೆ ನಮಗೆ ಇನ್ನು ನೋಟೀಸ್ ಬಂದಿಲ್ಲ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಈ ವಿಷಯವನ್ನು ನಾಳೇ ಬೆಳಿಗ್ಗೆ ಚರ್ಚೆಗೆ ತೆಗೆದುಕೊಳ್ಳಿ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ಇದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಾಗಿದೆ. ಇಷ್ಟು ಲೇಟಾಗಿದೆ, ನಂತರ ಇದು ಮೇಲ್ಮನೆಗೆ ಹೋಗಬೇಕಾಗುತ್ತದೆ. ಈ ವಿಷಯದ ಬಗ್ಗೆ ಸದನದಲ್ಲಿ ನಾವು ಚರ್ಚೆ ಮಾಡಿದ್ದೇವೆ.

ಶ್ರೀ ಕಾಗೋಡುತಿಮ್ಮಪ್ಪ : ಪಂಚಾಯತ್‌ರಾಜ್ ಆಕ್ಟ್‌ನ ಪ್ರತಿಯನ್ನು ಇವತ್ತು ನಮಗೆ ಡಿಸ್ಟ್ರಿಬ್ಯೂಟ್ ಮಾಡಿದ್ದಾರೆ.

ಶ್ರೀ ಎಂ. ಸಿ. ನಾಣಯ್ಯ : ಆರ್ಡಿನೆನ್ಸ್‌ನ್ನು ಕೊಟ್ಟು ತುಂಬಾ ದಿವಸವಾಯಿತು.

ಶ್ರೀ ಕಾಗೋಡುತಿಮ್ಮಪ್ಪ : ತಾವು ದೊಡ್ಡ ಪಂಚಾಯಿತಿಯನ್ನು ಮಾಡುವುದಕ್ಕೆ ಹೊರಟಿದ್ದೀರಿ. This bill needs a thorough discussion

ಶ್ರೀ ಎಂ. ಸಿ. ನಾಣಯ್ಯ : ನಾವು ಆರ್ಡಿನೆನ್ಸ್ ರಿಪ್ಲೇಸ್‌ಮೆಂಟ್ ಬಿಲ್‌ನ್ನು ತಂದಿದ್ದೇವೆ. ಇದರ ಬಗ್ಗೆ ಈ ಸದನದಲ್ಲಿ ಬೇಕಾದಷ್ಟು ಸಲ ಚರ್ಚೆ ಮಾಡಿದ್ದೇವೆ.

(6.20 ಪಿ. ಎಂ.)

ಶ್ರೀ ಕಾಗೋಡು ತಿಮ್ಮಪ್ಪ : ಇವತ್ತು ಇದ್ದಕ್ಕಿದ್ದಹಾಗೆ ಬಿಲ್ಲನ್ನು ತಂದು ಪಾಸ್ ಮಾಡಿ ಅಂದರೆ ಹೇಗೆ ?

ಶ್ರೀ ಎಂ. ಸಿ. ನಾಣಯ್ಯ : ಇದು ಸದನದಲ್ಲಿ ಚರ್ಚೆಯಾಗಿದೆ.

ಶ್ರೀ ಕಾಗೋಡುತಿಮ್ಮಪ್ಪ : ಇದು ಸಮಗ್ರವಾಗಿ ಚರ್ಚೆಯಾಗಬೇಕು. ಈಗ ಆಗುವುದಿಲ್ಲ. ನಾಳೆ ತೆಗೆದುಕೊಳ್ಳೋಣ.

ಶ್ರೀ ಎಂ. ಸಿ. ನಾಣಯ್ಯ : ದಯವಿಟ್ಟು ಇದನ್ನು ಪಾಸ್ ಮಾಡಿಕೊಡಿ.

ಶ್ರೀ ಮಲ್ಲಿಕಾರ್ಜುನಖರ್ಗೆ : ಇದರ ಮೇಲೆ ನಾನು ಮಾತನಾಡಬೇಕು. ಮಾನ್ಯ ಫೋರ್ಡೆಯವರು, ಕಾಗೋಡುತಿಮ್ಮಪ್ಪನವರು, ಜಯಚಂದ್ರರವರು ಎಲ್ಲರೂ ಮಾತನಾಡುತ್ತಾರೆ. ನಮ್ಮ ಕಡೆಯಿಂದ ಆರು ಜನ ಮಾತನಾಡುತ್ತಾರೆ. ಭಾರತೀಯ ಜನತಾ ಪಕ್ಷದ ವತಿಯಿಂದ ನಾಲ್ಕೈದು ಜನ ಮಾತನಾಡುತ್ತಾರೆ. ಆಮೇಲೆ ಮಾನ್ಯ ವಾಟಾಳ್‌ನಾಗರಾಜ್, ಪುಟ್ಟಣ್ಣಯ್ಯನವರು, ಶ್ರೀ ರಾಮರೆಡ್ಡಿಯವರು ಮಾತನಾಡುತ್ತಾರೆ. ಸುಮಾರು ಇದರ ಮೇಲೆ 15 ರಿಂದ 18 ಜನ ಮಾತನಾಡುತ್ತಾರೆ. ಒಬ್ಬರಿಗೆ 10 ನಿಮಿಷದಂತೆ ಸಮಯ ಕೊಟ್ಟರೆ ಸುಮಾರು ನಾಲ್ಕೈದು ತಾಸು ಆಗುತ್ತದೆ. ಇದು ಬಹಳ ಮುಖ್ಯವಾದುದು.

ಶ್ರೀ ಎಂ. ಸಿ. ನಾಣಯ್ಯ : ಈ ತರಹ ರಾಜಕಾರಣ ಮಾಡುವುದನ್ನು ಇನ್ನಾದರೂ ನಿಲ್ಲಿಸಿ ಸಾಕು. ಆರ್ಡಿನೆನ್ಸ್ ಬಂದು ಎಷ್ಟು ದಿವಸಗಳಾಯಿತು ? ಸದನದಲ್ಲಿ ಇದರ ಬಗ್ಗೆ ಬೇಕಾದಷ್ಟು ಚರ್ಚೆ ಮಾಡಿದ್ದಾರೆ. ನಾಲ್ಕೈದು ತಿದ್ದುಪಡಿ ತಂದಿದ್ದೇವೆ. ಅದಕ್ಕೋಸ್ಕರ ಚರ್ಚೆ ಮಾಡಬೇಕೆಂದು ಇದೆ.

ಶ್ರೀ ವಾಟಾಳ್ ನಾಗರಾಜ್ : ಚರ್ಚೆಯನ್ನು ಸಮಗ್ರವಾಗಿ ಮಾಡಬೇಕು. ಚರ್ಚೆಯಾಗದೆ ಪಾಸ್ ಮಾಡುವುದಕ್ಕಾಗುವುದಿಲ್ಲ. ಈಗಾಗಲೇ ಸಮಯ ಆರೂವರೆ ಆಯಿತು. ದಯವಿಟ್ಟು ಇದನ್ನು ಮುಂದಕ್ಕೆ ಹಾಕಿ. ನಾಳೆ ಬೆಳಿಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಿ. ಬೆಳಿಗ್ಗೆ ಬೇಕಾದರೆ 9 ಗಂಟೆಗೆ ಸಭೆ ಸೇರಲಿ.

SRI M.C. NANAIAH : This is the first bill to be taken up for consideration tomorrow. ನಾಳೆ ಬೆಳಿಗ್ಗೆ ಇದನ್ನು ಮೊದಲು ತೆಗೆದುಕೊಳ್ಳಬೇಕು.

ಶ್ರೀ ಬಿ. ಎ. ಮೊಯ್ದೀನ್ : ಯೂನಿವರ್ಸಿಟಿಯದು ಸಣ್ಣದೊಂದು ಬಿಲ್ ಇದೆ. ಏಳು ಜಿಲ್ಲೆಗಳು ಹೊಸದಾಗಿ ಆಯಿತಲ್ಲಾ ಅದರದೊಂದು ತಿದ್ದುಪಡಿ. ಡಿಸ್‌ಕಷನ್ಸ್ ಏನೂ ಇಲ್ಲ.

ಶ್ರೀ ಎಂ. ಸಿ. ನಾಣಯ್ಯ : ಏಕೆ ಈ ತರಹ ಮಾಡುತ್ತೀರಿ?

You are very non-cooprative now. I am sorry.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಏಕೆ ಈಗತಾನೇ ನಿಮಗೆ ಕೋಆಪರೇಷನ್ ಕೊಟ್ಟಿದ್ದೇವೆ.

ಶ್ರೀ ಎಂ. ಸಿ. ನಾಣಯ್ಯ : ಏನು ಸಾರ್ ನೀವು ಈ ತರಹ ಮಾಡುತ್ತೀರಲ್ಲಾ.

Mr. Ghorpade, I can understand. If you do not know. You know the whole thing. We did discuss it on the floor of the House. We did discuss it for one full day.

SRI MALLIKARJUNA KHARGE : This will take nearly three to four hours for discussion. As you know, Mr. Moily wants to speak, Mr. Ghorpade, and Sri Kagodu Thimmappa would like to speak and even I want to speak. The BJP Friends and Mr. Vatal Nagaraj will speak on this.

ನಿಮಗೇನು ನಾವು ಎಷ್ಟೇ ಚರ್ಚೆ ಮಾಡಿದರೂ ನೀವು ಪಾಸ್ ಮಾಡಿಕೊಳ್ಳುತ್ತೀರಿ, ನಾವೇನು ಮಾಡಬೇಕು? ನಾವೇನು ಮಾಡಬೇಕು ನಾವು ಮಾಡುತ್ತೇವೆ. ನೀವೇನು ಮಾಡಿಕೊಳ್ಳಬೇಕು ಅದನ್ನು ಮಾಡೇ ಮಾಡುತ್ತೀರಿ. ಕೊನೆಯ ಪಕ್ಷ ವಿಚಾರಗಳು ಜನರಿಗೆ ಗೊತ್ತಾಗಬೇಕು.

ಶ್ರೀ. ಎಂ. ಸಿ. ನಾಣಯ್ಯ : ಉಚ್ಚ ನ್ಯಾಯಾಲಯ ಏನು ತೀರ್ಪು ನೀಡಿತು. ಅದಕ್ಕೆ ಸುಪ್ರೀಂಕೋರ್ಟ್ ಏನು ಮಾಡಿದೆ ಅದೆಲ್ಲಾ ನಿಮಗೆ ಗೊತ್ತಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸುಪ್ರೀಂ ಕೋರ್ಟ್‌ನಲ್ಲಿ ಏನಾಯಿತು ?

SRI M.C. NANAIAH : In Supreme Court, SLP admitted, stay granted.

ಉಪಾಧ್ಯಕ್ಷರು : ಯೂನಿವರ್ಸಿಟಿ ಬಿಲ್ ಒಂದು ಸಣ್ಣದು ಇದೆ.

SRI M.C. NANAIAH : With folded hands, I speak now. By and large, the policy of the government, we have already put it across.

SRI M.Y. GHORPADE : That is alright.

ಶ್ರೀ ಬಿ. ಸೋಮಶೇಖರ್ : (ಕಂದಾಯ ಸಚಿವರು) ಮಾನ್ಯ ಉಪಾಧ್ಯಕ್ಷರೆ, ನಮ್ಮದೊಂದು ಬಿಲ್ಸ್ ಹೋದ ಸಭೆಯಲ್ಲಿ ಮಂಡಿಸಲಾಗಿತ್ತು.

ಶ್ರೀ ವಾಟಾಳ್ ನಾಗರಾಜ್ : ಈಗ ಸಮಯ ಆರೂವರೆ ಗಂಟೆಯಾಗಿದೆ ಈ ಸಭೆಯನ್ನು ತಾವು ಎಷ್ಟು ಹೊತ್ತು ನಡೆಸುತ್ತೀರಿ?

ಉಪಾಧ್ಯಕ್ಷರು : ಅದೊಂದು ಬಿಲ್ ಪಾಸ್ ಮಾಡಿಬಿಡೋಣ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ಅವೆಲ್ಲಾ ಚರ್ಚೆಯಾಗಬೇಕಾಗಿದೆ. ನಮಗೆ ಆ ಬಿಲ್‌ನ ಪ್ರತಿಗಳೇ ಬಂದಿಲ್ಲ.

ಶ್ರೀ ಬಿ. ಎಂ. ಮೊಯ್ದೀನ್ : ಇವತ್ತಿನ ಅಜೆಂಡಾದಲ್ಲಿ ನಮ್ಮ ಬಿಲ್ಸ್ ಬಂದಿದೆ.

ಉಪಾಧ್ಯಕ್ಷರು : ಈಗ ಬಿಲ್ಸ್‌ಗಳನ್ನು ತೆಗೆದುಕೊಳ್ಳುವುದು ಬೇಡವೆಂದರೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುತ್ತೀರಾ ?

ಶ್ರೀ ಬಿ. ಸೋಮಶೇಖರ್ : ಬೆಳಿಗ್ಗೆ ನನ್ನನ್ನು ಕರೆದಿದ್ದೀರಿ. ನಾನು ಸಭೆಯಲ್ಲಿ ಇರಲಿಲ್ಲ. ನಾನು

ಈಗ ಬಿಲ್‌ನ್ನು ಮಂಡಿಸಿ ಬಿಡುತ್ತೇನೆ. ಆಗ ನಾನು ಬೇರೆ ಯಾವುದೋ ಸಭೆಯಲ್ಲಿದ್ದೆ. ಬಹಳ ಸಣ್ಣ ಸಣ್ಣದು.

ಉಪಾಧ್ಯಕ್ಷರು : ಉನ್ನತ ಶಿಕ್ಷಣ ಸಚಿವರು ತಾವು ತಮ್ಮ ವಿಧೇಯಕ ಮಂಡಿಸಿ.

(ಈ) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 1999

ಶ್ರೀ ಬಿ.ಎ. ಮೊಯ್ದೀನ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1998 ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ ಬಿ. ಎ. ಮೊಯ್ದೀನ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈವೊಂದು ತಿದ್ದುಪಡಿಯನ್ನು ಏಳು ಜಿಲ್ಲೆಗಳು ಹೊಸದಾಗಿ ಬಂದಿದ್ದರಿಂದ ಈ ಯೂನಿವರ್ಸಿಟಿಯೊಳಗೆ ಈ ಜಿಲ್ಲೆಗಳನ್ನು ತರಬೇಕೆನ್ನುವ ಉದ್ದೇಶದಿಂದ ಇವನ್ನು ತಂದಿದ್ದೇವೆ. ದಯವಿಟ್ಟು ಇದನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ :-

"1998 ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು : ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ

"ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ.

ಶ್ರೀ ಬಿ.ಎ. ಮೊಯ್ದೀನ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ "1998 ರ